### ಜನ ಗಣ ಕನ್ನಡ ಮನ

‘ಜನ ಗಣ ಕನ್ನಡ ಮನ’ (ಎನ್. ಜಗನ್ನಾಥ ಪ್ರಕಾಶ್, ಜ. 27) ಗಣ ರಾಜ್ಯೋತ್ಸವದಲ್ಲಿ ಕರ್ನಾಟಕದ ಸ್ತಬ್ಧಚಿತ್ರಗಳು ಲೇಖನದ ಪರಿಕಲ್ಪನೆಯೇ ಸುಂದರ. ಈ ಸ್ತಬ್ಧಚಿತ್ರಗಳು ಕೇವಲ ಒಂದೆರಡು ನಿಮಿಷ ನಮ್ಮೆದುರು ಇರುತ್ತಾವಾದರೂ, ಅವು ನಮಗೆ ಕೊಡುವ ಹಿಗ್ಗು ಅಳೆಯಲಾಗದ್ದು.

—ಅನುರಾಧಾ ಕೆ.ಆರ್.

‘ಚಿತ್ರಪಟ ಕಥನ’ ಓದಿ ಬಹಳ ಸಂತೋಷವಾಯಿತು. ನಮ್ಮ ಹೆಮ್ಮೆಯ ಚೆಲುವ ಕನ್ನಡ ನಾಡು ಗಣರಾಜ್ಯೋತ್ಸವ ಪರೇಡ್‌ನಲ್ಲಿ, ಸತತವಾಗಿ ಭಾಗವಹಿಸುತ್ತಿರುವುದು ಹೆಮ್ಮೆಯ ಸಂಗತಿ.

—ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

### ಮೆಟಾವರ್ಸ್ ಮಾಯಾಜಾಲ

‘ಮೆಟಾವರ್ಸ್ ಮಾಯಾಜಾಲ’ (ಕರ್ಕಿ ಕೃಷ್ಣಮೂರ್ತಿ, ಜ. 20) ಮಾಹಿತಿಯುಳ್ಳ ಹಾಗೂ ಉಪಯೋಗಿ ಲೇಖನ.

—ಸುಚೇತಾ ಜಿ. ಮೂರ್ತಿ

ಲೇಖನ ಅತ್ಯಂತ ಅಚ್ಚರಿಯ, ವಿನೂತನ ವಿಷಯಗಳನ್ನು ಹಾಜರುಪಡಿಸಿದೆ. ಇತ್ತೀಚೆಗೆ ತಮಿಳುನಾಡಿಗೆ ಸೇರಿದ ದಿನೇಶ್ ಕ್ಷತ್ರಿಯನ್ ಅನ್ನುವವರು ಇದೇ ಫೆಬ್ರುವರಿಯಲ್ಲಿ ಅವರ ವಿವಾಹದ, ಆರತಕ್ಷತೆಯನ್ನು ಮೆಟಾವರ್ಸ್ ಮೂಲಕ ಆಚರಿಸಿಕೊಳ್ಳುವವರಿದ್ದಾರೆಂದು ವರದಿಯಾಗಿದೆ. ಹಾಗಾದರೆ ಇದು ಮೆಟಾವರ್ಸ್‌ನ ‘ಮೆಟಾ ವರ್ಷ’ ಎನ್ನೋಣವೇ?

—ನಿರುಕ್ತಾ



ಮೆಟಾವರ್ಸ್ ಎಂಬ ಮಾಯಾಜಾಲ ಮುಂದಿನ ದಿನಗಳಲ್ಲಿ ತನ್ನ ಅಖಂಡ ಬಾಹುಗಳಿಂದ ಇಡೀ ವಿಶ್ವವನ್ನೇ ಬಿಗಿದಪ್ಪಿಕೊಂಡಲ್ಲಿ ಆಶ್ಚರ್ಯವಿಲ್ಲ.

—ಬೆಂ. ಮು. ಮಾರುತಿ, ಬೆಂಗಳೂರು

ಮೆಟಾವರ್ಸ್‌ನಿಂದ ಭೌತಿಕ ಪ್ರವಾಸೋದ್ಯಮ ಕೊನೆಗೊಂಡು, ನಿರುದ್ಯೋಗ ಹೆಚ್ಚಳವಾಗಬಹುದು. ಸಲ್ಲಿ ಡೀಲ್ಸ್, ಬುಲ್ಲಿ ಬಾಯ್ಸ್‌ನಂತೆ ಮತ್ತೊಂದು ರೂಪದಲ್ಲಿ ಲೈಂಗಿಕ ಅಪರಾಧ ಲೋಕವೇ ಸೃಷ್ಟಿಯಾಗಬಹುದು.

—ಡಾ. ಬಿ. ಗೋಪಾಲ್ ಸಿಂಗ್, ಮೈಸೂರು

### ಲೈನ್ ಡ್ಯೂಡ್

‘ಲೈನ್ ಡ್ಯೂಡ್’ (ಪ್ರವೀಣ್ ಕುಲಕರ್ಣಿ, ಜ. 27) ಸೆಲೆಬ್ರಿಟಿ ಪುಟದ ಲೇಖನ ಚೆನ್ನಾಗಿತ್ತು. ರಾಬರ್ಟ್ ಅವರ ಯೋಚನೆ ಮತ್ತು ಯೋಜನೆ ವಿಚಿತ್ರ. ನಮ್ಮ ದೇಶದಲ್ಲಿ ಅದೇ ದುಡ್ಡನ್ನು ಕಂಪನಿಯವರಿಗೆ ಕೊಟ್ಟು ಹಿಂಬಾಗಿಲಿನಿಂದ ಹೋಗುತ್ತಿದ್ದರು.

—ತಿಮ್ಮರಾಜು, ದಾವಣಗೆರೆ

### ಧರಂ ಮತ್ತು ಬೀಡಿ!

‘ಧರಂ ಮತ್ತು ಬೀಡಿ!’ (ಪ್ರವೀಣ ಕುಲಕರ್ಣಿ, ಜ. 20) ಸೆಲೆಬ್ರಿಟಿ ಲೇಖನ ಓದಿದೆ. ಚಿರಯುವಕ ಎನಿಸಿದ್ದ ದೇವಾನಂದ್ ನಂತರ ಆ ಪಟ್ಟ ಧರ್ಮೇಂದ್ರರಿಗೆ ಸಲ್ಲುತ್ತದೆ. ಇಳಿವಯಸ್ಸಿನಲ್ಲೂ ಅಭಿನಯಕ್ಕೆ ಮರಳಿ ಬರುತ್ತಿರುವುದು ಸುಲಭವಲ್ಲ. ಧರಂ ಅಭಿನಯ ನೋಡುವ ಕುತೂಹಲವಿದೆ.

—ಟಿ. ಎಸ್. ಪ್ರತಿಭಾ, ಚಿತ್ರದುರ್ಗ

ಲೇಖನದಲ್ಲಿ, ‘ಧರಂ ಡಿಯೋಲ್ ಎಂಬ ಯುವಕ ಧರ್ಮೇಂದ್ರ ಎಂದು ಖ್ಯಾತವಾಗಿದ್ದೇ ಒಂದು ರೋಚಕ ಕಥೆ’ ಎಂದು ಬರೆದಿರುವುದು ಸಮಂಜಸವಾಗಿಲ್ಲ. ಆತ ನಿಜವಾಗಿಯೂ ಧರ್ಮೇಂದ್ರ ಸಿಂಗ್ ದೇವಲ. ಅಡ್ಡ ಹೆಸರು ದೇವಲ (ದೇವಳ, ದೇಗುಲ ಎಂದರ್ಥ) ಎಂಬುದು ಇಂಗ್ಲಿಷ್ ಅಪಭ್ರಂಶ ರೂಪತಾಳಿ ಡಿಯೋಲ್ ಆಗಿದೆ. ಈ ರೀತಿಯ ಅಪಭ್ರಂಶಗಳನ್ನೇ ಪುನರಾವರ್ತಿಸುವುದು ಅನರ್ಥಕಾರಿ. ಅವರ ಮಕ್ಕಳನ್ನೂ ಸನಿ ದೇವಲ್, ಬಾಬಿ ದೇವಲ್ ಎಂದು ಕರೆಯಬೇಕಲ್ಲವೇ?

—ಸರ್ವಜಿತ, ಹುಬ್ಬಳ್ಳಿ

### ದಾನಿಶ್ ಸೇಠ್ ಸಂದರ್ಶನ

‘ಕ್ಯಾಮೆರಾ ಹೊರತಾಗಿ ನಾನು ಹೆಚ್ಚು ಮಾತಾಡಲ್ಲ’ (ಸುಮಲತಾ ಎನ್. ಜ. 20) ಶೀರ್ಷಿಕೆಯಲ್ಲಿ ಪ್ರಕಟವಾದ ದಾನಿಶ್ ಸೇಠ್ ಸಂದರ್ಶನ ಓದಿದೆ. ‘ಹಂಬಲ್ ಪೊಲಿಟಿಶಿಯನ್ ನೋಗ್‌ರಾಜ್’ ವೆಬ್ ಸಿರೀಸ್ ಬಹಳ ಚೆನ್ನಾಗಿದೆ. ಪ್ರತಿ ಸಂಚಿಕೆಯಲ್ಲಿ ಕೂಡ ಹೊಟ್ಟೆ ಹುಣ್ಣು ಆಗುವ ಹಾಗೆ ಹಾಸ್ಯಭರಿತ ಸಂಭಾಷಣೆಯಿಂದ ಕೂಡಿದೆ.

—ಮೇಘನಾ ರಘುನಂದನ್, ಹೂವಿನಹಡಗಲಿ

### ಸೊಗಸಾದ ‘ಪ್ರೀತ್‌ಸು’

‘ಪ್ರೀತ್‌ಸು’ (ರಾಜೀವ ನಾರಾಯಣ ನಾಯಕ, ಜ. 20) ಕಾದಂಬರಿಯ ಮೊದಲನೇ ಕಂತನ್ನು ಓದಿದೆ. ಕಾದಂಬರಿಯಲ್ಲಿ ಹೊಸತನವಿದ್ದು ಪ್ರಾದೇಶಿಕತೆ ಬೆಸೆಯುವ, ವಿಭಿನ್ನ ಆಡುಭಾಷೆಯನ್ನು ಪರಿಚಯಿಸುವ, ವಿಧ ಪ್ರದೇಶದ ಬದುಕನ್ನು ಕಟ್ಟಿಕೊಡುವ ಎಲ್ಲಾ ಪ್ರಯತ್ನ ಇದೆ.

—ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

### ಗುರುತು

‘ಗುರುತು’ (ಪಿ.ಬಿ. ಪ್ರಸನ್ನ, ಜ. 20) ಕಥೆ ಪ್ರಸ್ತುತ ಪರಿಸ್ಥಿತಿಯನ್ನು ಪ್ರತಿಬಿಂಬಿಸುವಂತಹ ಪಾತ್ರಗಳಿಂದ ಮನವನ್ನು ತಟ್ಟುತ್ತದೆ.

—ಕಮಲಾದೇವಿ ರಾಜಶೇಖರ ಹಳೂರ್, ಬೆಂಗಳೂರು

ಕಷ್ಟಕಾಲದಲ್ಲಿ ಹಂಚಿಕೊಂಡು ತಿನ್ನುವ ಬಡವರಲ್ಲಿ ಇರುವ ಗುಣವನ್ನು ಕಥೆ ಚೆನ್ನಾಗಿ ನಿರೂಪಿಸುತ್ತದೆ. ಹಸಿವಿನ ಭಾಷೆಯನ್ನು ಹಸಿವೇ ಬಲ್ಲದು.

—ರಾಮಸ್ವಾಮಿ, ಬೆಂಗಳೂರು

ಕಥೆ ಮನಮುಟ್ಟುವಂತಿದೆ. ಹಸಿವಿನ ಅರಿವಿರುವವನಿಗೇ ಇನ್ನೊಬ್ಬ ಹಸಿದವನ ಕಷ್ಟಕ್ಕೆ ಸ್ಪಂದಿಸುವ ವಿಶೇಷ ಗುಣವಿರುವುದನ್ನ ಲೇಖಕರು ಚೆನ್ನಾಗಿ ನಿರೂಪಿಸಿದ್ದಾರೆ.

—ವಿಜಯಾ ಪ್ರಸಾದ್, ಬೆಂಗಳೂರು

### ವೀರಾಸಾಮಿಯ ಐಸ್‌ಕ್ಯಾಂಡಿ

‘ವೀರಾಸಾಮಿಯ ಐಸ್ ಕ್ಯಾಂಡಿ’ (ಜಿ.ವಿ. ಅರುಣ, ಜ. 20) ಬರೆದ ಬರಹ ಓದಿದಾಕ್ಷಣ ಹಲವಾರು ವೀರಾಸಾಮಿಯರು ನನ್ನ ಕಣ್ಮುಂದೆ ಮೂಡಿಬಂದರು. ಲಿಂಗನಮಕ್ಕಿ ಅಣೆಕಟ್ಟು ನಿರ್ಮಿಸುವ ವೇಳೆ ಇದ್ದ ಅಂಥಾ ಓರ್ವ ವ್ಯಕ್ತಿ ಆ ಬಳಿಕ ಎಷ್ಟು ಎತ್ತರಕ್ಕೆ ಹೋದ ಎಂಬುದು ನಮ್ಮೂರಿನ ಹಲವರಿಗೆ ಗೊತ್ತು.

—ವಾಸುದೇವ ಭಟ್

ಬರಹ ತುಂಬಾ ಚೆನ್ನಾಗಿತ್ತು. ವೀರಸಾಮಿಯ ಕಥೆ ಓದುತ್ತಿರಬೇಕಾದರೆ ನಾವೂ ಅದೇ ತರಗತಿಯಲ್ಲಿದ್ದೆವು ಅನ್ನಿಸುವಷ್ಟು ಸ್ಪಷ್ಟವಾಗಿತ್ತು. ತಮ್ಮ ಪರಿಶ್ರಮದಿಂದ ಎಂಥಾ ಉತ್ತಮ ಮಟ್ಟವನ್ನು ತಲುಪಬಹುದು ಎಂಬುದಕ್ಕೆ ವೀರಸಾಮಿ ಸಾಕ್ಷಿ.

—ರಂಜನಾ ಭಟ್ ಬೈಂದೂರು

ಹಳೆ ನೆನಪುಗಳು ಯಾವಾಗಲೂ ಸಿಹಿ. ವೀರಸ್ವಾಮಿ ಧಡ್ಡ ಇದ್ದು, ಮುಂದೆ ದೊಡ್ಡ ಮನುಷ್ಯ ಆದದ್ದು ಸಿನಿಮಾ ಕಥೆ ತರಹ ಇದ್ದರೂ ನಿಜವಿದ್ದರೂ ಇರಬಹುದು ಅಲ್ಲವೇ?

—ಬಸವರಾಜ ಹರಿಹರ, ಧಾರವಾಡ

### ಪರಕಾಯ ಪ್ರವೇಶ

‘ಪರಕಾಯ ಪ್ರವೇಶ’ (ಪುರಂಜೀವಿ, ಜ. 20) ಓದಿದೆ. ಅರವತ್ತು ವರ್ಷಗಳ ಹಿಂದಿನ ಜುಜುಬಿ ‘ಪವಾಡ’ ಒಂದರ ಉದಾಹರಣೆಯನ್ನು, ನಿಜದಲ್ಲಿ ಒಳ್ಳೇ ಮ್ಯಾಜಿಕ್ ಅನ್ನಿಸಿಕೊಳ್ಳಬಹುದಾದ ಸಂಗತಿಯನ್ನು ಮುಂದಿಟ್ಟುಕೊಂಡು, ವೈಚಾರಿಕವೋ ಆಧ್ಯಾತ್ಮಿಕವೋ ಪ್ರಮಾಣಕ್ಕೆ ಪ್ರಯತ್ನಿಸಿದ್ದು ಬಾಲಿಶ. ನೀರ ಮೇಲಿನ ನಡೆ, ಕುಳಿತಂತೆ ಗಾಳಿಯಲ್ಲಿ ತೇಲುವುದು, ಮನೋಬಲದಲ್ಲಿ ಲೋಹಗಳನ್ನು ಬಗ್ಗಿಸುವುದು, ಶೂನ್ಯದಿಂದ ವಸ್ತು ಸೃಷ್ಟಿಸುವುದು ಮುಂತಾದ ನೂರೆಂಟು ಹುಸಿವಾಸ್ತವಗಳ ಪಟ್ಟಿಯಲ್ಲಷ್ಟೇ ಈ ಪರಕಾಯ ಪ್ರವೇಶಕ್ಕೂ ಸ್ಥಾನ.

—ಅಶೋಕವರ್ಧನ, ಮಂಗಳೂರು

### ಸಂಕ್ರಾಂತಿ ಸ್ಪೆಷಲ್ ಅಡುಗೆ

‘ಸಂಕ್ರಾಂತಿ ಸ್ಪೆಷಲ್’ (ಶ್ಯಾಮಲಾ ಸತ್ಯ, ಜ. 20) ಸಂಕ್ರಾಂತಿಯ ವಿಶೇಷ ಅಡುಗೆಗಳು ಆಕರ್ಷಕ ಚಿತ್ರಗಳೊಂದಿಗೆ ಮುದ ನೀಡಿದವು. ಆರೋಗ್ಯಕರ ತಿನಿಸುಗಳು ಮಾಡಲು ಬಹಳ ಸುಲಭ ಹಾಗೂ ರುಚಿಯೂ ಹೆಚ್ಚು.

—ಟಿ. ಆರ್. ಉಷಾರಾಣಿ, ಮಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in